ಉಪಾಧ್ಯಕ್ಷರು: ನೀವು ನೋಟೀಸ್ ಕೊಟ್ಟಿಲ್ಲದಿರುವುದರಿಂದ ಮಾತನಾಡಲು ಸಾಧ್ಯವಿಲ್ಲ. ತಾವೇನೂ ಹೊಸಬರಲ್ಲ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ಸಭಾತ್ಯಾಗ ಮಾಡಿದರು)

2.30 ಪಿ.ಎಂ

+ ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಉಪಸಭಾಪತಿಗಳೇ, ಈ ದಿವಸ ಬಹಳ ಗಂಭೀರವಾದಂಥ ವಿಚಾರದ ಮೇಲೆ ಬಹಳ ಗಂಭೀರವಾದಂಥ ಚರ್ಚೆ ನಡೆದಿದೆ. ಈ ಪ್ರಸಂಗ ದುರದೃಷ್ಟಕರ ಆದರೂ ಸಹ ಈ ರೀತಿಯಾದಂಥ ಒಂದು ಚರ್ಚೆ ನಡೆದಿದ್ದು ಉಪಯುಕ್ತ. ಅನ್ನ, ಬಟ್ಟೆ ಕೊಡುವ ನಮ್ಮ ರೈತನ ಬಗ್ಗೆ ಇಷ್ಟೊಂದು ಕಳಕಳಿಯನ್ನು ನಮ್ಮ ವಿರೋಧ ಪಕ್ಷದ ನಾಯಕರು, ಭಾರತೀಯ ಜನತಾ ಪಕ್ಷದ ನಾಯಕರು ಮತ್ತು ಒಟ್ಟು ಸುಮಾರು 9 ಜನ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಗಂಭೀರವಾದಂಥ ಚರ್ಚೆಯನ್ನು ನಡೆಸಿದ್ದಾರೆ. ಈ ವಿಷಯ ದುರಾದೃಷ್ಟಕರ ಆದರೂ ಸಹಿತ ಇಂತಹ ವಿಚಾರದಲ್ಲಿ ಚರ್ಚೆ ಆಯಿತಲ್ಲಾ ಎನ್ನತಕ್ಕಂಥದ್ದರ ಬಗ್ಗೆ ನಾನು ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಇವತ್ತು ನಮ್ಮ ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿಗೆ ಅವರು ನಂಬಿಕೊಂಡಿರತಕ್ಕ ಬೆಳೆ ಎಂದರೆ ಬೇಳೆಕಾಳುಗಳು ಅದು ಕಣಜ. ಹಿಂಗಾರಿನಲ್ಲಿಯಾಗಲೀ, ಮುಂಗಾರಿನಲ್ಲಿ ಆಗಲಿ ಯಾವುದೇ ಹಂಗಾಮಿನಲ್ಲಾದರೂ ಅವರು ಹೆಚ್ಚಾಗಿ ಬೆಳೆಯತಕ್ಕಂಥದ್ದು ಬೇಳೆ. ಬೇಳೆಕಾಳು ಅತ್ಯಂತ ಮುಖ್ಯವಾಗಿರುವ ಬೆಳೆ. ನಮ್ಮ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಬೆಳೆಗಳು ಯಾವ ರೀತಿ ಹಣವನ್ನು ಕೊಡತಕ್ಕ ಬೆಳೆಗಳಾಗಿವೆಯೋ ಅದೇರೀತಿ ಗುಲ್ಬರ್ಗಾ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬೇಳೆಕಾಳು ಬಹಳ ಮುಖ್ಯವಾಗಿರತಕ್ಕ ಬೆಳೆ. ಸರ್ವೇಸಾಮಾನ್ಯವಾಗಿ ಪ್ರತಿವರ್ಷವೂ ಸಹ ಅವರು ಬೇಳೆಯನ್ನು ಬೆಳೆಯುತ್ತಾ ಬಂದಿದ್ದಾರೆ. ಕಳೆದ ವರ್ಷ ಬಹಳ ಉತ್ತಮವಾದ ಬೆಳೆಯನ್ನು ಬೆಳೆದಿದ್ದಾರೆ, ಮತ್ತೆ ಅದರ ಹಿಂದಿನ ವರ್ಷದಲ್ಲೂ ಕೂಡ ಉತ್ತಮವಾದಂಥ ಬೆಳೆಯನ್ನು ಬೆಳೆದಿದ್ದಾರೆ. ಈ ವರ್ಷ ದುರಾದೃಷ್ಟವಶಾತ್ ಈ ಹಿಂಗಾರು ಮತ್ತು ಮುಂಗಾರು ಎರಡರಲ್ಲೂ ಸಹ ಯಾವ ಸಮಯಕ್ಕೆ ಮಳೆ ಆಗಬೇಕಾಗಿತ್ತೋ, ಆ ಸಮಯಕ್ಕೆ ಮಳೆ ಆಗಲಿಲ್ಲ, ಯಾವಾಗ ಮಳೆ ಅವಶ್ಯಕತೆ ಇರಲಿಲ್ಲವೋ ಆ ಸಮಯದಲ್ಲಿ ಮಳೆ ಹೆಚ್ಚಾಗಿ ಆಯಿತು. ಇದರ ಜೊತೆಗೆ ವಾತಾವರಣದಲ್ಲೂ ಸಹ ಮೋಡ ಕವಿದಂಥ ವಾತಾವರಣ ಇದ್ದರೆ, ವಾತಾವರಣದಲ್ಲಿ ತೇವಾಂಶ ಹೆಚ್ಚಿಗೆ ಇದ್ದರೆ, ಹುಳುಗಳಿಗೆ ಮತ್ತು ಕೀಟಬಾಧೆಗಳಿಗೆ ಯಾರೇ ಏನೇ ಮಾಡಿದರೂ ಸಹ ಅದನ್ನು ತಪ್ಪಿಸಲಿಕ್ಕೆ ಆಗುವುದಿಲ್ಲ. ಏಕೆಂದರೆ ನಾವು ಜಡವಸ್ತುಗಳ ಮೇಲೆ ಔಷಧ ಪ್ರಯೋಗ ಮಾಡುವುದಿಲ್ಲ. ಬದುಕಿರುವಂಥ ಪ್ರಾಣಿ ಕೀಟಗಳು ವಾತಾವರಣಕ್ಕೆ ಹೊಂದಿಕೊಳ್ಳುವಂಥ ಶಕ್ತಿಯನ್ನು ಅವು ತನ್ನಷ್ಟಕ್ಕೆ ತಾನೇ